ವಿಚಾರಿಸಿದ. ಮಗು ಹಣ್ಣು ಬೇಕೆಂದು ಅಳುತಿದೆ. ಎಲ್ಲಿಂದ ತರುವುದು ಅತ್ತು ಅತ್ತು ಮಗು ಉಸಿರುಗಟ್ಟಿ ಸತ್ತೇ ಹೋಗುವುದು. ನಾನೊಬ್ಬ ತಂದೆಯಾಗಿ ಮಗುವಿನ ಆಸೆ ಪೂರೈಸಲಾಗುತ್ತಿಲ್ಲ. ಎಂದು ತಂದೆ ಸಂಕಟಪಟ್ಟ. ಆಗ ರಾಜ ಕೊನೆಯದಾಗಿ ಉಳಿದಿದ್ದ ಒಂದೇ ಒಂದು ಹಣ್ಣಿನ ತೊಳೆಯನ್ನು ಆ ಮಗುವಿಗೆ ಕೊಟ್ಟು ತನ್ನ ಮನೆಯ ದಾರಿ ಹಿಡಿದ.

ಮನೆಯಲ್ಲಿ ಅಜ್ಜಿ ಮೊಮ್ಮಗ ಸುಗಂಧ ಪುಷ್ಪ ತರುತ್ತಾನೆ. ಅವನಿಂದ ಊರ ಸಾಹುಕಾರ ಮಗಳಿಗೆ ಸುಗಂಧ ದ್ರವ್ಯ ಮಾಡಿ ಕೊಡಬಹುದು ಎಂದು ಕಾದಿದ್ದಳು. ಬರಿಗೈಲಿ ಬಂದ ಮೊಮ್ಮಗನ ಅಜ್ಜಿ ಕೇಳುವ ಮೊದಲೇ ಆದ ಘಟನೆಯನ್ನೆಲ್ಲ ವಿವರಿಸಿದ. ಎಲ್ಲಾ ಕೇಳಿದ ಅಜ್ಜಿ ಒಳ್ಳೆಯ ಕೆಲಸ ಮಾಡಿದೆ ಮಗಾ. ಸಾಯುವ ಪರಿಸ್ಥಿತಿಯಲ್ಲಿದ್ದವರನ್ನು ನಮ್ಮ ಪ್ರಾಣ ಒತ್ತೆಯಿಟ್ಟಾದರೂ ಬದುಕಿಸಬೇಕು. ಎಂದು ಹೇಳಿ ಖುಶಿ ಪಡುತ್ತಾ. 'ನನಗೆ ಕಣ್ಣಿಲ್ಲದಿದ್ದರೆ ಏನಾಯಿತು! ನೀನೆ ನನ್ನ ಕಣ್ಣು ಎಂದು ತಬ್ಬಿಕೊಳ್ಳುವಾಗಲೆ, ಒಳಗೆ ಒಬ್ಬ ಯಜಮಾನ ಬಂದು ನಿಲ್ಲುತ್ತಾನೆ. ಅಜ್ಜಿ ನಾನು ಪಕ್ಕದ ಊರಿನ ದೊಡ್ಡ ಹೂವಿನ ತೋಟದ ರೈತ. ಇಂದು ಈ ಊರಿನ ಮೇಲೆ ಹಾದು ನನ್ನ ಮೊಮ್ಮಗಳನ್ನು ಕರೆದುಕೊಂಡು ಹೊರಟಿದ್ದೆ. ಅವಳು ತನಗೆ ಹಣ್ಣು ಬೇಕೆಂದು ರಚ್ಚೆ ಹಿಡಿದಳು. ಹೊಸಬ ಎಲ್ಲಿಂದ ಹಣ್ಣು ತರಲಿ ಎನ್ನುವಾಗಲೇ, ನಿಮ್ಮ ಮೊಮ್ಮಗ ಹಣ್ಣು ನೀಡಿದ. ಇಂತಹ ಮೊಮ್ಮಗನ ಪಡೆದ ನೀವೇ ಧನ್ಯ ಎಂದ. ತಾನೆ ಮುಂದೆ ನಿಂತು ಅಜ್ಜಿ ಕಣ್ಣಿಗೆ ಚಿಕಿತ್ಸೆ ಕೊಡಿಸಿದ. ಮೊಮ್ಮಗನನ್ನು ಶಾಲೆಗೆ ಸೇರಿಸಿದ. ಹಾಗೇ ಆ ರೈತ ತನ್ನ ಹೂವಿನ ತೋಟದ ಎಲ್ಲಾ ಉಸ್ತುವಾರಿಯನ್ನು ಅಜ್ಜಿಗೆ ಕೊಟ್ಟ. ಅಂದಿನಿಂದ ಅಜ್ಜಿ ಹೂವು ಬೆಳೆಸಿ ಸುಗಂಧ ತಯಾರಿಸಿ, ಮೊಮ್ಮಗನ ವಿದ್ಯಾಭ್ಯಾಸದ ಕಡೆಗೂ ಗಮನ ಹರಿಸಿದಳು.

ಮೊಮ್ಮಗ ಮಾತ್ರ ತಾನು ವೃಕ್ಷ ದೇವತೆ ಹೇಳಿದಂತೆ ಹಣ್ಣಿನ ತೊಳೆಯೆಲ್ಲಾ ಪರರಿಗೆ ಕೊಟ್ಟೆ. ಹಣ್ಣು ಪಡೆದದ್ದು ವ್ಯರ್ಥ ಎಂದು ಭಾವಿಸಿದ್ದೆ ಆ ವೃಕ್ಷ ದೇವತೆ ಹೇಳಿದ್ದು ಹುಸಿಯಾಗಲಿಲ್ಲ. ಇದೆ ಇರಬೇಕು ಕೊಟ್ಟುದ್ದನ್ನು ಪಡೆ. ಪಡೆದುದನ್ನು ಮತ್ತೆ ಕೊಡು; ಎಂದು ಅಜ್ಜಿ ಹೇಳುವ ಮಾತಿನ ಅರ್ಥ. ಎಂದು ತನ್ನಷ್ಟಕ್ಕೆ ತಾನೆ ಗುನುಗಿದ. ಇಂತಹ ಮೊಮ್ಮಗನಿಂದಲೇ ಇದೆಲ್ಲಾ ಸಾಧ್ಯವಾಯಿತೆಂದ ಅಜ್ಜಿ, ಊರ ತುಂಬ ತನ್ನ ಮೊಮ್ಮಗ ಸುಗಂಧ ರಾಜ. ಎಲ್ಲರಿಗೂ ಹೂವಿನಂತೆ ಪರಿಮಳ ಬೀರುವ ಮಗ ಎಂದು ಕೊಂಡಾಡಿದಳು. ■



# ನಾಳೆಯದನ್ನು ಇಂದೇ ಮಾಡಿ

■ ಟಿ.ಆರ್. ಉಷಾರಾಣಿ

ಒಂದು ಚಿಕ್ಕ ಕೊಳ ಇತ್ತು. ಅದರ ತುಂಬಾ ಮೀನುಗಳು. ಬಣ್ಣ ಬಣ್ಣದ ಮೀನುಗಳು. ಅದರಲ್ಲಿ ಹಿರಿಯ ಮೀನು, ಕಿರಿಯ ಮೀನು ಹೀಗೆ ನಾನಾ ರೀತಿಯ ಮೀನುಗಳು ಜಾಲಿಯಾಗಿ ಈಜಾಡಿಕೊಂಡಿದ್ದವು. ಒಂದು ದಿನ ಒಂದು ಅಜ್ಜ ಮೀನು ಇತ್ತಲ್ಲ ಅದು ಎಲ್ಲ ಮೀನುಗಳನ್ನು ಮೀಟಿಂಗಿಗೆ ಕರೆಯಿತು. ಅಜ್ಜ ಮೀನು ಒಂದು ಪುಟ್ಟ ಭಾಷಣ ಮಾಡಿತು. ' ಬಂಧುಗಳೇ, ಇಲ್ಲಿಯವರೆಗೂ ನಾವೆಲ್ಲಾ ಸಂತೋಷವಾಗಿ ಈಜಾಡಿಕೊಂಡು ಇದ್ದೆವು. ಈಗ ಹತ್ತಿರದಲ್ಲೇ ಅಪಾಯ ಇದೆ. ಕೆಲವು ಬೆಸ್ತರು ಇಲ್ಲಿಗೆ ಬಂದು ಮೀನು ಹಿಡಿಯುವುದಾಗಿ ಮಾತಾಡ್ತಾ ಇದ್ದರು. ಆ ಬೆಸ್ತರು ಯಾವಾಗ ಬೇಕಾದರೂ ಬರಬಹುದು ಅದಕ್ಕೆ ನಾವೆಲ್ಲ ಅವರು ಬರುವ ಮೊದಲೇ ಇಲ್ಲಿಂದ ಪಾರಾಗಬೇಕು. ಇಲ್ಲಿ ಒಂದು ಸಣ್ಣ ದಾರಿ ಇದೆ ಅದು ಸೀದಾ ಸಮುದ್ರಕ್ಕೆ ಹೋಗುತ್ತದೆ. ನಾವು ಎಲ್ಲರೂ ಒಟ್ಟಾಗಿ ನಾಳೆ ಬೆಳಗಿನಜಾವ ಇಲ್ಲಿಂದ ಹೊರಟು ಬಿಡೋಣ. ನಿಮಗೆಲ್ಲಾ ಎಷ್ಟು ಬೇಕೋ ಅಷ್ಟು ಈಜಾಡಿಕೊಳ್ಳಿ. ನಾಳೆ ನಾನು ಮುಂದಿರುತ್ತೇನೆ ಎಲ್ಲರೂ ನನ್ನನ್ನು ಹಿಂಬಾಲಿಸಿ, ನಮ್ಮ ಜೀವ ಉಳಿಸಿಕೊಳ್ಳೋಣ......' ಎಂದಿತು. ಮೀನುಗಳೆಲ್ಲಾ ಹೋ ಹೋ ಎಂದು ಕೂಗಿದವು. ಸ್ವಲ್ಪ ದೊಡ್ಡ ಮೀನುಗಳು 'ಹೌದು ಹೌದು' ಎಂದು ತಲೆ ಅಲ್ಲಾಡಿಸಿದವು. ಕೆಲವು ಮರಿ ಮೀನುಗಳು ಇದ್ದವು. ಅವು ಬಹಳ ತುಂಟ ಮೀನುಗಳು. ಅವುಗಳಿಗೆ ಅಜ್ಜನ ಮಾತುಗಳು ರುಚಿಸಲಿಲ್ಲ.

'ಇಲ್ಲಿ ಎಷ್ಟು ಚೆನ್ನಾಗಿದೆ. ಇನ್ನು ಕೆಲವು ದಿನಗಳು ನಾವೆಲ್ಲಾ ಇಲ್ಲೇ ಇರೋಣ. ಈಗಲೇ ಸಮುದ್ರಕ್ಕೆ ಹೋಗುವುದು ಬೇಡ ನಿಧಾನವಾಗಿ ಹೋದರೆ ಆಯಿತು...' ಎಂದು ನಿರ್ಧಾರ ಮಾಡಿಕೊಂಡವು.

ಸೂರ್ಯ ಹುಟ್ಟುವ ಮುನ್ನವೇ ಅಜ್ಜ ಮೀನು ಕೂಗಿ ಕರೆಯಿತು. ಬಹುತೇಕ ಮೀನುಗಳು ಅಜ್ಜನ ಹಿಂದೆ ಹಿಂದೆ ಹೊರಟು ಬಿಟ್ಟವು. ಕೆಲವು ಮರಿಗಳು ಮಾತ್ರ ಅಲ್ಲೇ ಉಳಿದು ಬಿಟ್ಟವು. ಹೀಗೆ ಒಂದೆರಡು ದಿನ ಆರಾಮವಾಗಿ ಕಳೆಯಿತು. ಮರಿ ಮೀನುಗಳು ಕೊಳದ ತುಂಬಾ ಸುತ್ತಾಡಿಕೊಂಡು ಆಟವಾಡಿಕೊಂಡು ಆನಂದವಾಗಿದ್ದವು. ನಾಳೆ ಹೋಗೋಣ ನಾಳಿದ್ದು ಹೋಗೋಣ ಎಂದು ಪ್ರತಿದಿನವೂ ಮುಂದೂಡುತ್ತಲೇ ಇದ್ದವು. ಹೀಗೆ ಎಷ್ಟೋ ದಿನ ಕಳೆದು ಹೋಯಿತು . ಒಂದು ದಿನ ಇದ್ದಕ್ಕಿದ್ದಂತೆ ಮರಿ ಮೀನುಗಳಿಗೆ ಉಸಿರುಗಟ್ಟಿದಂತಾಯ್ತು ನೋಡಿದರೆ ಬೆಸ್ತರು ಬಲೆ ಬೀಸಿ ಮೀನುಗಳನ್ನು ಹಿಡಿದು ಬಿಟ್ಟಿದ್ದಾರೆ. ಅನುಭವಿ ಅಜ್ಜನ ಮಾತುಗಳನ್ನು ಕೇಳದ ಮರಿ ಮೀನುಗಳು ನೀರಿನಿಂದ ಬೇರೆಯಾಗಿ ಸತ್ತು ಹೋದವು.

ಮಕ್ಕಳೇ ಅಪಾಯ ಬರುವ ಮೊದಲೇ ಎಚ್ಚರಿಕೆಯಿಂದ ಇರಬೇಕು. ಹಿರಿಯರು ಅನುಭವದಿಂದ ಹೇಳುವ ಮಾತುಗಳನ್ನು ಕಿರಿಯರು ಕೇಳಬೇಕು. ನಾಳೆ ಮಾಡುವ ಕೆಲಸವನ್ನು ಇಂದೇ ಮಾಡಿ ಇಂದು ಮಾಡುವ ಕೆಲಸವನ್ನು ಈಗಲೇ ಮಾಡಿ. ನೆನ್ನೆ ಕಳೆದು ಹೋಯಿತು. ನಾಳೆ ಹೇಗೋ ಗೊತ್ತಿಲ್ಲ. ಇಂದು ಮಾತ್ರ ನಮ್ಮದು. ■